

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **01–10–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಯುರೋಪ್, ಸ್ಪೇನ್, ಸಿಸ್‌ಲಿ ಮುಂತಾದ ದೇಶಗಳಲ್ಲಿ ತಬ್ಲೀಗ್ ಮಾಡುವುದರ ಕುರಿತು ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ಹಝ್ರ್‌ರತ್ ಉಮರ್ ರಝಿಯಲ್ಲಾಹುರ ಕಾಲದ ಘಟನೆಗಳನ್ನು ಉಲ್ಲೇಖಿಸುತ್ತಾ ಒಂದು ಭಾಷಣದಲ್ಲಿ ಹೇಳುತ್ತಾರೆ: ಸಿರಿಯದ ಯುದ್ಧದಲ್ಲಿ ಸಿಪಾಯಿಗಳ ಕೊರತೆ ಮತ್ತು ಶತ್ರುಗಳು ಬಹಳ ಅಧಿಕವಿದ್ದ ಕಾರಣ ಹೆಚ್ಚಿನ ಸೈನಿಕರನ್ನು ಕಳುಹಿಸಲು ಹಝ್ರ್‌ರತ್ ಉಮರ್(ರ)ರೊಡನೆ ಹಝ್ರ್‌ರತ್ ಅಬೂಉಬೈದ(ರ) ವಿನಂತಿಸಿದರು. ಅನೇಕ ಗೋತ್ರಗಳೊಡನೆ ಸಮಾಲೋಚನೆ ನಡೆಸಿದ ನಂತರ ಒಂದು ಗೋತ್ರದ ಯುವಕರನ್ನು ಒಟ್ಟುಗೂಡಿಸಿ ಹಝ್ರ್‌ರತ್ ಉಮರ್(ರ) ಹಝ್ರ್‌ರತ್ ಅಬೂಉಬೈದರಿಗೆ ಹೀಗೆ ಬರೆದರು: ಮೂರು ಸಾವಿರ ಸಿಪಾಯಿಗಳನ್ನು ಮತ್ತು ಮೂರು ಸಾವಿರಕ್ಕೆ ಸಮವಾಗಿ ಉಮರ್ ಬಿನ್ ಮಅದಿ ಕರ್‌ಬರನ್ನು ನಾನು ನಿಮ್ಮ ಸಹಾಯಕ್ಕಾಗಿ ಕಳುಹಿಸುತ್ತಿದ್ದೇನೆ.

ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಮ್ಮೊಬ್ಬ ಯುವಕನನ್ನು ಮೂರು ಸಾವಿರ ಜನರನ್ನು ಎದುರಿಸಲು ಕಳುಹಿಸಿದರೆ, ಇದು ಬುದ್ಧಿಗೆ ನಿಲುಕದ ಮಾತೆಂದು ಹೇಳುವನು. ಆದರೆ ಈ ಜನರು ವಿಶ್ವಾಸದ ದೃಢತೆ ಮತ್ತು ಖಲೀಫರ ಮಾತಿಗೆ ಪ್ರಾಮುಖ್ಯತೆ ಕೊಡುವ ಕಾರಣದಿಂದ ಒಬ್ಬಂಟಿಯಾದ ಅಮ್ರ್ ಬಿನ್ ಮಅದಿ ಕರ್‌ಬ್ ಬಗ್ಗೆ ಆಕ್ಷೇಪವೆತ್ತುವ ಬದಲಾಗಿ ಬಹಳ ವೈಭವದಿಂದ ತಕ್ಬೀರ್ ಹೇಳುತ್ತಾ ಅವರನ್ನು ಸ್ವಾಗತಿಸಿದರು. ಮುಸ್ಲಿಮರ ಸಹಾಯಕ್ಕಾಗಿ ಬಹುಶಃ ಒಂದೆರಡು ಲಕ್ಷದಷ್ಟು ಸೈನಿಕರು ಬರುತ್ತಿದ್ದಾರೆ ಎಂದು ಭಾವಿಸಿ ಭಯದಿಂದ ಶತ್ರುಗಳು ಯುದ್ಧ ಮೈದಾನದಿಂದ ಸೋತು ಪರಾರಿಯಾದರು. ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಾವು ಸಹ ಇದೇ ರೀತಿಯಲ್ಲಿ ನಮ್ಮ ಮನಸ್ಸನ್ನು ಸಮಾಧಾನಪಡಿಸಬೇಕು.

ಈಜಿಪ್ಟ್ ವಿಜಯಗಳಲ್ಲಿ ಫರ್ಮಾ ಯುದ್ಧವು ಸ್ಮರಣೀಯವಾದುದಾಗಿದೆ. ಫರ್ಮಾ ರೋಮಿನ ಸಮುದ್ರ ಮತ್ತು ಪಲೋಝಿಯ ಬಲಗಡೆಯ ಸಮೀಪ ನೈಲ್ ನದಿಯೊಂದಿಗೆ ಒಂದು ಪರ್ವತದ ಮೇಲೆ ನೆಲೆಸಿದ್ದ ಈಜಿಪ್ಟಿನ ಒಂದು ಪ್ರಸಿದ್ಧ ಪಟ್ಟಣವಾಗಿತ್ತು. ಅಲ್ಲಾಮ ಶಿಬ್ಲಿ ನುಅ್‌ಮಾನಿಯರ ಪ್ರಕಾರ ಬೈತುಲ್ ಮಖ್‌ದಿಸಿನ ವಿಜಯದ ನಂತರ ಹಝ್ರ್‌ರತ್ ಅಮ್ರ್ ಬಿನ್ ಆಸ್‌ರ ಒತ್ತಾಯದ ಮೇರೆಗೆ ಹಝ್ರ್‌ರತ್ ಉಮರ್(ರ) ನಾಲ್ಕು ಸಾವಿರದಷ್ಟು ಸೈನಿಕರನ್ನು ಕೊಟ್ಟು ಹಝ್ರ್‌ರತ್ ಅಮ್ರ್ ಬಿನ್ ಆಸ್‌ರನ್ನು ಈಜಿಪ್ಟ್ ಕಡೆಗೆ ರವಾನೆ ಮಾಡಿದರು. ಆದರೆ ಈಜಿಪ್ಟ್ ತಲುಪುವುದಕ್ಕೆ ಮುಂಚೆ ನನ್ನ ಪತ್ರ ಸಿಕ್ಕಿದರೆ ಮರಳಿ ಬರಬೇಕೆಂದು ಹಝ್ರ್‌ರತ್ ಉಮರ್(ರ) ಆದೇಶಿಸಿದರು. ಇದರ ಕುರಿತು ಬೇರೆ ಬೇರೆ ವರದಿಗಳು ಇವೆ. ಆದರೆ ಈಜಿಪ್ಟಿನ ಗಡಿಯೊಳಗಿನ ಪ್ರದೇಶವಾದ ಉರೈಶ್‌ನಲ್ಲಿ ಅವರಿಗೆ ಪತ್ರ ಲಭಿಸಿತ್ತು ಎಂಬ ವರದಿಯೇ ಸರಿಯೆಂದು ತೋರುತ್ತದೆ. ಈಜಿಪ್ಟಿಗೆ ಪ್ರವೇಶಿಸಿದ ನಂತರ ಅವರಿಗೆ ಮುಂದೆಯೇ ಹೋಗಬೇಕಾಗಿತ್ತು. ಏಕೆಂದರೆ, ಮುಂದೆ ಹಾಕಿದ ಹೆಜ್ಜೆಯಿಂದ ಸತ್ಯವಿಶ್ವಾಸಿಯು ಹಿಂದೆ ಸರಿಯುವುದಿಲ್ಲ. ಇಸ್ಲಾಮಿನ ಮಾಮೂಲಿ ಸಂಖ್ಯೆಯಲ್ಲಿರುವ ಸೈನ್ಯವನ್ನೂ ಹಾಗೂ ತಮ್ಮ ಹೆಚ್ಚಿನ ಸಂಖ್ಯೆ ಮತ್ತು ತಯಾರಿಯನ್ನು ನೋಡಿಕೊಂಡು, ಮುಸ್ಲಿಮರು ಬೇಗನೇ ಧೈರ್ಯಗುಂದಿ ಸಹನೆಗೆಟ್ಟು ಮರಳಿ ಹೋಗುವರು ಎಂಬ ಭಾವನೆಯಿಂದ ರೋಮನರು ತಮ್ಮ ಕೋಟೆಯನ್ನು ಮುಚ್ಚಿದರು. ಅನೇಕ ತಿಂಗಳ ಮುತ್ತಿಗೆಯ ನಂತರ, ಕೋಟೆಯಿಂದ ಹೊರಗೆ ಬಂದ ರೋಮನ್ ಸೈನ್ಯದ ಒಂದು ಗುಂಪಿನೊಂದಿಗೆ ಹಝ್ರ್‌ರತ್ ಅಮ್ರ್ ಬಿನ್ ಆಸ್(ರ) ಯುದ್ಧ ಮಾಡಿ ಅವರನ್ನು ಸೋಲಿಸಿ, ಹಿರಿಯ ವಿಜಯಕ್ಕೆ ಬೇಕಾಗಿರುವ ಮಾರ್ಗವನ್ನು ತೆರೆದರು.

ಫಿಸ್‌ತಾತ್‌ನಿಂದ ಮೂವತ್ತು ಮೈಲು ದೂರದಲ್ಲಿರುವ ಒಂದು ಪಟ್ಟಣವನ್ನು ಜಯಿಸಲು ಹಝ್ರ್‌ರತ್ ಅಮ್ರ್ ಬಿನ್ ಆಸ್(ರ) ಸಿರಿಯದ ಮಾರ್ಗವಾಗಿ ಹೊರಟರು. ಆಗ ಯುದ್ಧ ಮಾಡುವ ಉದ್ದೇಶದಿಂದ ರೋಮ್ ಸೈನ್ಯವು ಅವರನ್ನು ಮಾರ್ಗ ಮಧ್ಯೆ ತಡೆದರು. ಯುದ್ಧ ಮಾಡುವುದಕ್ಕೆ ಬದಲಾಗಿ ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಮತ್ತು ಜಿಝ್ಯಿಯ ಕೊಡುವ ಸಲಹೆಯನ್ನು ನೀಡುತ್ತಾ ಕರುಣೆ ಮತ್ತು ಔದಾರ್ಯದಿಂದ ವರ್ತಿಸುವ ಬಗ್ಗೆ ಹಝ್ರ್‌ರತ್ ಪೈಗಂಬರ್(ಸ)ರ ಉಪದೇಶವನ್ನು ಅವರು ಈಜಿಪ್ಟಿನ ನಿವಾಸಿಗಳಿಗೆ ನೀಡಿದರು. ಅವರಿಗೆ ನಾಲ್ಕು ದಿನಗಳ ಕಾಲಾವಕಾಶವನ್ನು ನೀಡಲಾಯಿತು. ಆದರೆ ಈಜಿಪ್ಟಿನ ಅಧಿಕಾರಿ ಅರ್‌ತಬೂನ್ 12 ಸಾವಿರ ಸೈನಿಕರೊಂದಿಗೆ ರಾತ್ರೋರಾತ್ರಿ ಮುಸ್ಲಿಮರ ಮೇಲೆ ಹಲ್ಲೆ ನಡೆಸಿ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರನ್ನು ಶಹೀದ್ ಮಾಡಿದನು. ಆದರೆ ಅವರ ಒಂದು ಸಾವಿರ ಸಿಪಾಯಿಗಳು ಕೊಲ್ಲಲ್ಪಟ್ಟು ಮೂರು ಸಾವಿರದಷ್ಟು ಸಿಪಾಯಿಗಳು ಬಂಧಿಯಾದಾಗ ಯುದ್ಧ ಮೈದಾನದಿಂದ ಪರಾರಿಯಾದರು. ಬಲ್‌ಬೀಸ್‌ನಲ್ಲಿ ಒಂದು ತಿಂಗಳಷ್ಟು ಕಾಲ ಯುದ್ಧ ಜಾರಿಯಲ್ಲಿದ್ದ ನಂತರ ಕೊನೆಗೆ ಮುಸ್ಲಿಮರಿಗೆ ವಿಜಯ ಲಭಿಸಿತು.

ಯುದ್ಧದ ಸಂಘರ್ಷದ ನಡುವೆ ಖಿಬ್‌ತಿಯರ ಸರದಾರ ಮಖೂಖಿಸ್‌ನ ಮುದ್ದಿನ ಮಗಳಾದ ಅರ್ಮಾನೂಸ ಬಂಧಿಯಾದಳು. ಮಖೋಖಸ್ ಹಝ್ರ್‌ರತ್ ಪೈಗಂಬರ್(ಸ)ರಿಗೆ

ಹಿಂದೆ ಕೊಡುಗೆ ಕಳುಹಿಸಿದ್ದನು. ಆ ಕಾರಣದಿಂದ **ಹಲ್ ಜಝ್ಹಾಉಲ್ ಇಹ್‌ಸಾನ್ ಇಲ್ಲಲ್ ಇಹ್‌ಸಾನ್** ( ) ಎಂಬ ಆಯತ್ತಿನ ಆಧಾರದಲ್ಲಿ ಹಝ್ರತ್ ಅಮ್ರ್ ಬಿನ್ ಆಸ್(ರ) ಮಖೋಖಸ್‌ನ ಮಗಳನ್ನು ಅವಳ ಎಲ್ಲ ಆಭರಣಗಳು ಮತ್ತು ಸೇವಕರೊಂದಿಗೆ ಅತ್ಯಂತ ಗೌರವಾದರದಿಂದ ಮರಳಿ ಕಳುಹಿಸಿದರು. ಮರಳಿ ಹೋಗುವಾಗ ಅವಳ ಸೇವಕಿ ಅರ್ಮಾನೂಸನೊಡನೆ ಹೀಗೆ ಹೇಳಿದಳು: ನಾವು ಎಲ್ಲ ಕಡೆಯಿಂದಲೂ ಅರೇಬಿಯರಿಂದ ಸುತ್ತುವರೆಯಲ್ಪಟ್ಟಿದ್ದೇವೆ. ಅರ್ಮಾನೂಸ ಹೇಳಿದಳು: ಅರೇಬಿಯರ ಡೇರೆಯಲ್ಲಿ ನನ್ನ ಜೀವ ಮತ್ತು ಮಾನ ಸುರಕ್ಷಿತವೆಂದು ಭಾವಿಸುತ್ತೇನೆ. ಆದರೆ ನನ್ನ ತಂದೆಯ ಕೋಟೆಯಲ್ಲಿ ನನ್ನ ಜೀವ ಸುರಕ್ಷಿತವೆಂದು ನನಗೆ ಅನಿಸುವುದಿಲ್ಲ. ಅನಂತರ ಅವಳು ತನ್ನ ತಂದೆಯ ಬಳಿಗೆ ಹೋದಾಗ, ಅವಳೊಡನೆ ಮುಸ್ಲಿಮರು ತೋರಿಸಿದ ವರ್ತನೆಯಿಂದ ಅವಳ ತಂದೆ ಸಂತೋಷಗೊಂಡನು.

ಹಝ್ರತ್ ಅಮ್ರ್ ಬಿನ್ ಆಸ್(ರ)ರ ತೀರ್ಮಾನವನ್ನು ಎಲ್ಲ ಸಹಾಬರು ಸರಿಯೆಂದು ಹೇಳಿದರು. ಈ ಘಟನೆ ಮುಸ್ಲಿಮರ ಬುದ್ಧಿವಂತಿಕೆ ಮತ್ತು ನೈತಿಕ ಶ್ರೇಷ್ಠತೆಯ ಸಾಕ್ಷ್ಯಾಧಾರವಾಗಿದೆ.

ಅಮ್‌ದನೀನ್ ಸಮೀಪಕ್ಕೆ ಹೋಗಿ ಮುಸ್ಲಿಮರು ತಂಗಿದರು. ರೋಮನರು ಬಾಬಿಲೋನಿನ ಕೋಟೆಗೆ ತಮ್ಮ ಅತ್ಯುತ್ತಮ ಸೈನ್ಯವನ್ನು ತಲುಪಿಸಿದ್ದರು. ಮತ್ತು ಅಮ್‌ದನೀನ್ ಕೋಟೆಯನ್ನು ಬಹಳ ಉತ್ತಮ ರೀತಿಯಲ್ಲಿ ಸುದೃಢಗೊಳಿಸಿ ಯುದ್ಧಕ್ಕಾಗಿ ತಯಾರಾಗಿದ್ದರು. ಅರೇಬಿಯರೊಂದಿಗೆ ತೆರೆದ ಮೈದಾನದಲ್ಲಿ ಯುದ್ಧ ಮಾಡುವುದು ಅವರಿಗೆ ಸಾಧ್ಯವಾದ ಸಂಗತಿಯಲ್ಲವೆಂದು ಅವರಿಗೆ ಗೊತ್ತಿತ್ತು. ಅಮ್‌ದನೀನ್‌ನ ಸೈನಿಕರು ಕೆಲವೊಮ್ಮೆ ಹೊರಗೆ ಬಂದು ವಿಫಲ ಹೋರಾಟ ನಡೆಸಿ ನಂತರ ಮರಳಿ ಹೋಗುತ್ತಿದ್ದರು. ಅನೇಕ ವಾರಗಳು ಹೀಗೆಯೇ ಕಳೆದುವು. ಇದೇ ವೇಳೆ, ಮುಸ್ಲಿಂ ಸೈನ್ಯದ ಸಹಾಯಕ್ಕಾಗಿ ಹಝ್ರತ್ ಉಮರ್(ರ) ನಾಲ್ಕು ಸಾವಿರ ಸಿಪಾಯಿಗಳನ್ನು ಕಳುಹಿಸಿದರು. ಈ ಸಹಾಯಕ ಸೈನ್ಯವನ್ನು ಕಳುಹಿಸುವುದರೊಂದಿಗೆ ಹಝ್ರತ್ ಅಮ್ರ್ ಬಿನ್ ಆಸ್‌ರಿಗೆ ಹಝ್ರತ್ ಉಮರ್(ರ) ಹೀಗೆ ಪತ್ರ ಬರೆದರು: "ಈಗ ನಿಮ್ಮೊಂದಿಗೆ 12 ಸಾವಿರ ಯೋಧರ ಸೈನ್ಯವಿದೆ. ಕಡಿಮೆ ಸಂಖ್ಯೆಯಲ್ಲಿರುವ ಕಾರಣದಿಂದ ಅದು ಎಂದಿಗೂ ಪರಾಜಯಗೊಳ್ಳದು." ರೋಮಿನ ಸಂಗ್ರಾಮಿಗಳು ಖಿಬ್ತಿಯರೊಂದಿಗೆ ಮುಸ್ಲಿಮರನ್ನು ಎದುರಿಸಲು ಹೊರಟರು. ಉಭಯ ಸೈನ್ಯಗಳ ನಡುವೆ ಘೋರ ಯುದ್ಧ ನಡೆಯಿತು. ಶತ್ರುಗಳು ಪರಾಜಿತರಾದರು.

ವಿವಿಧ ವಿಜಯಗಳ ಬಗ್ಗೆ ಪ್ರಸ್ತಾಪವಿದೆ. ಅಮ್‌ದನೀನ ವಿಜಯದ ನಂತರ ಮೊತ್ತಮೊದಲು ಫಯೂಮಿನ ಪೂರ್ತಿ ರಾಜ್ಯದ ಮೇಲೆ ಮತ್ತು ಐನುಶ್ಶಮ್ಸ್‌ನಲ್ಲಿ ಮುಸ್ಲಿಮರು ರೋಮನರ ಮೇಲೆ ವಿಜಯ ಸಾಧಿಸಿದರು. ಮನೂಫಿಯದ ಎರಡು ಪಟ್ಟಣಗಳಾದ ಅಸ್‌ರೀಬ್ ಮತ್ತು ಮನೂಫ್‌ನ ಮೇಲೆ ವಿಜಯ ಸಾಧಿಸಲಾಯಿತು. ಬಾಬಿಲೋನ್ ಅಥವಾ ಫಿಸ್‌ತಾತ್‌ನಲ್ಲಿ ಏಳು ತಿಂಗಳ ಮುತ್ತಿಗೆಯ ನಂತರ ಒಳಗೆ ಹೋಗಿ ಯುದ್ಧ ಮಾಡುತ್ತಾ ಕೋಟೆಯ ಮೇಲೆ ವಿಜಯ ಸಾಧಿಸಲಾಯಿತು.

ಫಿಸ್‌ತಾತ್ ವಿಜಯದ ನಂತರ ಅಲೆಕ್ಸಾಂಡ್ರಿಯವನ್ನು ಜಯಿಸಲು ಹಝ್ರತ್ ಉಮರ್(ರ) ಅನುಮತಿ ಕೊಟ್ಟರು. ಅಲೆಕ್ಸಾಂಡ್ರಿಯದ ಮೇಲೆ ಏಳು ತಿಂಗಳ ತನಕ ಮುತ್ತಿಗೆ ಮುಂದುವರೆಯಿತು. ಹಝ್ರತ್ ಉಮರ್(ರ) ಚಿಂತಿತರಾದರು. ಅವರು ಹೀಗೆ ಪತ್ರ ಬರೆದರು: ಬಹುಶಃ ನೀವು ಅಲ್ಲಿದ್ದುಕೊಂಡು ಐಷಾರಾಮ ಜೀವಿತಕ್ಕೆ ಒಳಗಾಗಿದ್ದೀರಿ, ಇಲ್ಲದಿದ್ದರೆ ವಿಜಯ ಸಾಧಿಸಲು ಇಷ್ಟು ತಡವಾಗುತ್ತಿರಲಿಲ್ಲ. ಈ ಸಂದೇಶ ತಲುಪಿದ ಕೂಡಲೇ ಮುಸ್ಲಿಮರನ್ನು ಜಿಹಾದ್ ಮಾಡಲು ಹುರಿದುಂಬಿಸಿ ಹಲ್ಲೆ ಮಾಡಿರಿ. ಹಝ್ರತ್ ಉಮರ್(ರ)ರ ಈ ಪತ್ರವನ್ನು ಓದಿಹೇಳಿದ ನಂತರ ಹಝ್ರತ್ ಅಮ್ರ್ ಬಿನ್ ಆಸ್(ರ) ಹಝ್ರತ್ ಉಬಾದ ಬಿನ್ ಸಾಮಿತ್‌ರನ್ನು ಕರೆದು ಧ್ವಜವನ್ನು ಅವರಿಗೆ ಒಪ್ಪಿಸಿದರು. ಮುಸ್ಲಿಮರು ಅತ್ಯಂತ ತೀವ್ರ ದಾಳಿ ನಡೆಸಿದರು ಮತ್ತು ಪಟ್ಟಣವನ್ನು ಜಯಿಸಿದರು. ಅದೇ ಸಮಯ ಹಝ್ರತ್ ಅಮ್ರ್(ರ) ಮದೀನಕ್ಕೆ ದೂತನನ್ನು ಕಳುಹಿಸುತ್ತಾ ಅವನೊಡನೆ ಹೀಗೆ ಹೇಳಿದರು: ಎಷ್ಟು ಬೇಗನೇ ಹೋಗಲು ನಿನಗೆ ಸಾಧ್ಯವೋ ಅಷ್ಟು ಬೇಗನೇ ಹೋಗಿ ಅಮೀರುಲ್ ಮೂಅ್‌ಮಿನೀನ್‌ರಿಗೆ ಸಂತೋಷ ವಾರ್ತೆ ತಿಳಿಸು. ದೂತನು ಮಧ್ಯಾಹ್ನ ಸಮಯದಲ್ಲಿ ಮದೀನಕ್ಕೆ ತಲುಪಿದನು. ಅದು ವಿಶ್ರಾಂತಿ ಮಾಡುವ ಸಮಯವೆಂಬ ಭಾವನೆಯಿಂದ ಆತನು ಮೊದಲು ಮಸ್ಜಿದ್ ನಬವಿಯ ಕಡೆಗೆ ಹೋದನು. ಆಕಸ್ಮಿಕವಾಗಿ ಹಝ್ರತ್ ಉಮರ್(ರ)ರ ಸೇವಕಿ ಅಲ್ಲಿಗೆ ಬಂದಳು. ಅವಳು ತಕ್ಷಣವೇ ಹೋಗಿ ಅಮೀರುಲ್ ಮೂಅ್‌ಮಿನೀನಿಗೆ ತಿಳಿಸಿದಳು. ವಿಜಯದ ಸುದ್ದಿ ಕೇಳಿ ಹಝ್ರತ್ ಉಮರ್(ರ) ನೆಲದಲ್ಲಿ ಸಜದ ಮಾಡುತ್ತಾ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿದರು. ಅನಂತರ ಹಝ್ರತ್ ಉಮರ್(ರ) ದೂತನೊಡನೆ ಹೀಗೆ ಕೇಳಿದರು: ನೀನು ನೇರವಾಗಿ ನನ್ನ ಬಳಿಗೆ ಏಕೆ ಬರಲಿಲ್ಲ. ಅವನು ಹೇಳಿದನು: ನೀವು ವಿಶ್ರಾಂತಿ ಪಡೆಯುತ್ತಿರಬಹುದು ಎಂದು ನಾನು ಯೋಚಿಸಿದೆ. ಹಝ್ರತ್ ಉಮರ್(ರ) ಹೇಳಿದರು: ನೀನು ನನ್ನ ಬಗ್ಗೆ ಏಕೆ ಹೀಗೆ ಯೋಚಿಸಿದೆ. ನಾನು ಹಗಲು ಸಮಯದಲ್ಲಿ ನಿದ್ದೆ ಮಾಡಿದರೆ, ಖಿಲಾಫತಿನ ಹೊಣೆಗಾರಿಕೆಯನ್ನು ವಹಿಸಲು ಯಾರಿದ್ದಾರೆ?

ಅಲೆಕ್ಸಾಂಡ್ರಿಯದ ವಿಜಯದೊಂದಿಗೆ ಪೂರ್ತಿ ಈಜಿಪ್ಟಿನ ಮೇಲೆ ವಿಜಯ ಸಾಧಿಸಲಾಯಿತು. ಈ ಯುದ್ಧಗಳಲ್ಲಿ ಅನೇಕರನ್ನು ಬಂಧಿಸಲಾಯಿತು. ಕೈದಿಗಳ ಕುರಿತು ಹಝ್ರತ್ ಅಮ್ರ್‌ರಿಗೆ ಹಝ್ರತ್ ಉಮರ್(ರ) ಪತ್ರ ಮೂಲಕ ಹೀಗೆ ನಿರ್ದೇಶನ ನೀಡಿದರು: ಎಲ್ಲ ಕೈದಿಗಳನ್ನು ಕರೆದು, ಅವರಿಗೆ ಮುಸ್ಲಿಮರಾಗಲು ಅಥವಾ ತಮ್ಮ ಧರ್ಮದಲ್ಲಿ ನೆಲೆನಿಲ್ಲಲು ಅವಕಾಶವಿದೆ ಎಂದು ಹೇಳಿರಿ.

ಅಲೆಕ್ಸಾಂಡ್ರಿಯದ ವಿಜಯಕ್ಕೆ ಸಂಬಂಧಿಸಿ, ಹಝ್ರತ್ ಉಮರ್(ರ)ರ ಆದೇಶದ ಪ್ರಕಾರ ಅಲೆಕ್ಸಾಂಡ್ರಿಯದ ಲೈಬ್ರರಿ ಆರು ತಿಂಗಳ ತನಕ ಬೆಂಕಿಗೆ ಆಹುತಿಯಾಯಿತು ಎಂದು ಹೇಳಿ ವಿರೋಧಿಗಳು ವಿಶೇಷವಾಗಿ ಕ್ರೈಸ್ತ ಲೇಖಕರು ಆಕ್ಷೇಪಿಸುತ್ತಾ ಮುಸ್ಲಿಮರು ಅರಿವು ಮತ್ತು ಬುದ್ಧಿಯ ವಿರೋಧಿಗಳಾಗಿದ್ದರು ಎಂಬ ಭಾವನೆಯನ್ನು ಉಂಟುಮಾಡಲು ಪ್ರಯತ್ನಿಸುತ್ತಾರೆ –

ನಊಧುಬಿಲ್ಲಾಹ್. ಆದರೆ, ಅರಿವು ಗಳಿಸುವುದು ಪ್ರತಿ ಮುಸ್ಲಿಮನಿಗೆ ಕಡ್ಡಾಯವೆಂದೂ ಅರಿವು ಗಳಿಸಲಿಕ್ಕಾಗಿ ಚೀನಾ ದೇಶಕ್ಕೆ ಹೋಗಬೇಕಾಗಿ ಬಂದರೆ ಹೋಗಿರಿ ಎಂದೂ ಯಾವ ಸಮುದಾಯದೊಡನೆ ಹಝ್ರತ್ ಪೈಗಂಬರ್(ಸ) ಹೇಳಿದ್ದರೋ ಆ ಸಮುದಾಯದ ಮೇಲೆ ಲೈಬ್ರರಿ ಸುಟ್ಟುಹಾಕಿದ ಆರೋಪ ಹೊರಿಸುವುದು ಬುದ್ಧಿ ಮತ್ತು ಸಾಕ್ಷ್ಯಾಧಾರದ ತತ್ವಗಳಿಗೆ ವಿರುದ್ಧವಾಗಿದೆ. ಅಲೆಕ್ಸಾಂಡ್ರಿಯದ ಗ್ರಂಥಾಲಯ ಸುಡಲ್ಪಟ್ಟ ಘಟನೆ ಸಂಪೂರ್ಣವಾಗಿಯೂ ಸುಳ್ಳು ಮತ್ತು ಕೃತ್ರಿಮ ಕಥೆಯಾಗಿದೆ ಎಂದು ಅನೇಕ ಕ್ರೈಸ್ತ ಮತ್ತು ಯುರೋಪಿಯನ್ ಸಂಶೋಧಕರು ಸಾಬೀತುಗೊಳಿಸಿರುವರು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಸಹ ತನ್ನ ತಸ್ದೀಖೇ ಬರಾಹೀನೆ ಅಹ್ಮದಿಯ ಎಂಬ ಗ್ರಂಥದಲ್ಲೂ ಈ ಆಕ್ಷೇಪಕ್ಕೆ ಪುರಾವೆಗಳೊಂದಿಗೆ ಶಕ್ತವಾಗಿ ಉತ್ತರ ನೀಡಿದ್ದಾರೆ.

ಹಝ್ರತ್ ಉಮರ್ ಫಾರೂಖ್‌ರ ಖಿಲಾಫತ್ ಕಾಲದಲ್ಲಿ, ಇಸ್ಲಾಮಿನ ಆಡಳಿತವು ಪೂರ್ವದಲ್ಲಿ ಜೈಹೂನ್ ನದಿ ಮತ್ತು ಸಿಂಧ್ ನದಿಯವರೆಗೂ ಪಶ್ಚಿಮದಲ್ಲಿ ಆಫ್ರಿಕದ ಮರುಭೂಮಿ ತನಕವೂ ಉತ್ತರ ದಿಕ್ಕಿನಲ್ಲಿ ಏಶ್ಯದ ಕೋಚಕ್ ಪರ್ವತಗಳು ಮತ್ತು ಆರ್ಮೇನಿಯದಿಂದ ದಕ್ಷಿಣದಲ್ಲಿ ಅಲ್‌ಕಾಹಿಲ್ ಸಮುದ್ರ ಮತ್ತು ನೋಬ ತನಕವೂ ಒಂದು ಜಾಗತಿಕ ದೇಶದ ರೂಪದಲ್ಲಿ ಲೋಕದ ನಕಾಶೆಯಲ್ಲಿ ಪ್ರಕಟವಾಗಿತ್ತು. ಎಲ್ಲರೂ ಇಸ್ಲಾಮಿನ ನ್ಯಾಯ ಮತ್ತು ಕರುಣೆಯ ನೆರಳಿನಲ್ಲಿ ಶಾಂತಿ ಮತ್ತು ನೆಮ್ಮದಿಯ ಜೀವಿತವನ್ನು ಕಳೆದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಿಮ್ಮ ಕೆನ್ನೆಗೆ ಯಾರಾದರೂ ಹೊಡೆದರೆ, ನೀವು ಸಹ ಅವರ ಕೆನ್ನೆಗೆ ಹೊಡೆಯಬಹುದು ಎಂಬ ಅನುಮತಿಯನ್ನು ಅಲ್ಲಾಹನು ಕೊಟ್ಟಿದ್ದರೂ, ಪ್ರತಿಕಾರ ಮಾಡುವುದು ಸರಿಯಲ್ಲವೆಂದು ತೋರುವ ಸಂದರ್ಭಗಳಲ್ಲಿ ಸುಮ್ಮನಿರಲು ಮತ್ತು ಕೆನ್ನೆಗೆ ಹೊಡೆದದಕ್ಕೆ ಬದಲಾಗಿ ಹೊಡೆಯಲು ಹೋಗಬೇಡಿ ಎಂದೂ ಅಲ್ಲಾಹನು ಹೇಳಿದ್ದಾನೆ. ಅಫ್ಘಾನಿಸ್ತಾನ, ಬುಖಾರದ ಗೋತ್ರಗಳು ಮತ್ತು ಕುರ್ದಿಗಳ ದೌರ್ಜನ್ಯಗಳನ್ನು ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ) ಏಕೆ ಕ್ಷಮಿಸಲಿಲ್ಲ ಎಂಬುದಕ್ಕೆ ಪುರಾವೆಗಳು ಸಿಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ಕೆಲವು ಗೋತ್ರಗಳು ಮುಸ್ಲಿಮರ ಮೇಲೆ ದಾಳಿ ಮಾಡಿರಲಿಲ್ಲ, ಬದಲಾಗಿ ಮುಸ್ಲಿಮರು ಎಚ್ಚರಗೊಳ್ಳಲು ಮತ್ತು ಮುಸ್ಲಿಮರಲ್ಲಿ ಒಂದು ಹೊಸ ಸ್ಫೂರ್ತಿ ಹಾಗೂ ಹೊಸ ಜೀವಿತ ಉಂಟಾಗಲಿಕ್ಕಾಗಿ ಅಲ್ಲಾಹನು ದಾಳಿ ನಡೆಸಿದ್ದನು ಎಂದು ಅವರು ಮೂವರಿಗೂ ಗೊತ್ತಿತ್ತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಸಂಬಂಧವಾಗಿ ಒಂದು ಖುತ್ಬದಲ್ಲಿ ಜಮಾಅತಿಗೆ ಹೀಗೆ ಉಪದೇಶ ನೀಡಿದರು: ಆಪತ್ತುಗಳು ಮತ್ತು ಕಷ್ಟತೆಗಳು ನಮ್ಮನ್ನು ಅಲ್ಲಾಹನ ಸಮೀಪಗೊಳಿಸುವಂತದ್ದಾಗಿರಬೇಕು. ಇವೇ ಅನಂತರ ವಿಜಯಕ್ಕೆ ಕಾರಣವಾಗುತ್ತವೆ. ಆದರೆ ನಾವು ಕೇವಲ ಈ ಸಂಗತಿಗಳಿಗೆ ಹೆದರಿ ಹಿಂದೆಸರಿಯುವುದಾದರೆ ಮತ್ತು ತಮ್ಮ ಸುಧಾರಣೆಯ ಕಡೆಗೆ ಗಮನಹರಿಸುವುದಿಲ್ಲವೆಂದಾದರೆ, ಪ್ರಗತಿ ಉಂಟಾಗಲಾರದು. ಅಭಿವೃದ್ಧಿಗಳು ಲಭಿಸುವ ಮತ್ತು ವಿಪತ್ತುಗಳೂ ಕೊನೆಗೊಳ್ಳುವ ದಿನಗಳಲ್ಲಿ ಅಲ್ಲಾಹನ ಕಡೆಗೆ ವಿಶೇಷವಾಗಿ ಹೆಚ್ಚು ಗಮನಹರಿಸಬೇಕಾಗಿದೆ. ನಮ್ಮ ಆಧ್ಯಾತ್ಮಿಕ ಏಳಿಗೆ ಮತ್ತು ಆಧ್ಯಾತ್ಮಿಕ ಒಳಿತಿನ ಕಡೆಗೆ ಗಮನಹರಿಸಬೇಕಾಗಿದೆ. ಇಂದು ಸಹ ಅಹ್ಮದಿಯರು ಈ ಸಂಗತಿಯನ್ನು ಅರಿಯಬೇಕು.

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُ اَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَاْمُرُ بِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَاءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ o اُذْکُرُوا اللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ۔


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 01-10-2021*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon